
ಗುರುವಾರ, 28 ಡಿಸೆಂಬರ್ 2017 | ಪುಟಗಳು: 14+4+4(MNG+4) | ಬೆಲೆ: ₹ 5.00
www.vijaykarnataka.com
ಸಂಪುಟ: 17 | ಸಂಚಿಕೆ: 152
VK
ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ |
PRIDE

CENTRAL LIBRARY



ಮನಮೋಹನ್ ಸಿಂಗ್ ಅವರ ದೇಶಪ್ರೇಮ, ಬದ್ಧತೆಯನ್ನು ಮೋದಿ ಪ್ರಶ್ನೆ ಮಾಡಿಲ್ಲ: ಜೇಟ್ಲಿ P11

ಕುರಾನ್‌ಗೆ ವಿರುದ್ಧವಾಗಿದ್ದರೆ ತ್ರಿವಳಿ ತಲಾಖ್ ವಿಧೇಯಕವನ್ನು ಒಪ್ಪುವುದಿಲ್ಲ ಎಂದು ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ಹೇಳಿದೆ

ನಕಲಿ ಖಾತೆ ಸೃಷ್ಟಿ ತಡೆಯಲು ಆಧಾರ್ ನೆರವು: ಫೇಸ್‌ಬುಕ್ ಸಂಸ್ಥಾಪಕ ಜುಕರ್ ಬರ್ಗ್ ಸ್ಪಷ್ಟನೆ

# ವೇತನ ಕೊಡದಿದ್ದರೆ ಮಾನ್ಯತೆಯೇ ರದ್ದು!

## ಎಐಸಿಟಿಇಯಿಂದ ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಸೂಚನೆ

■ **ಸ್ಟೀವನ್ ರೇಗೊ,** ಮಂಗಳೂರು

ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಈ ಬಾರಿ ಮತ್ತೊಂದು ಹೊಡೆತ ಬೀಳುವ ಸಾಧ್ಯತೆಗಳು ದಟ್ಟವಾಗಿದೆ. ಈ ಹಿಂದೆ ಕಡಿಮೆ ವಿದ್ಯಾ ರ್ಥಿಗಳಿರುವ ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಖಾಯಂ ಬೀಗ ಹಾಕು ವ ನಿರ್ಧಾರಕ್ಕೆ ಬಂದ ಎಐಸಿಟಿಇ ಈಗ ಹನ್ನೆರಡು ತಿಂಗಳಿ ಗೂ ಹೆಚ್ಚು ಕಾಲ ಬೋಧಕ ಸಿಬ್ಬಂದಿಗೆ ನಿಗದಿತ ವೇತನವನ್ನು ನಿಯ ಮಿತವಾಗಿ ನೀಡದೇ ಇರುವ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಮಾನ್ಯತೆ ರದ್ದು ಮಾಡುವ ಹೊಸ ನಿರ್ಧಾರಕ್ಕೆ ಮುನ್ನುಡಿ ಬರೆದಿದೆ.

ಪ್ರವೇಶ ನೀಡಲು ಅನುಮತಿ ಪಡೆದುದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಂಡಿರುವ ಸಂಸ್ಥೆಗಳು ಕೂಡ ಭಾರಿ ದಂಡವನ್ನು ಕಟ್ಟಬೇಕಾದ ಅನಿವಾರ್ಯತೆ ಕೂಡ ಇನ್ನು ಮುಂದೆ ಸೃಷ್ಟಿಯಾಗಲಿದೆ. ಇಂತಹ ಪ್ರಕರಣಗಳಲ್ಲಿ ಎಂಜಿನಿಯರಿಂಗ್, ಮ್ಯಾನೇಜ್‌ಮೆಂಟ್ ಹಾಗೂ ಇತರ ತಾಂತ್ರಿಕ ಕೋರ್ಸ್‌ಗಳನ್ನು ನೀಡುವ ಶಿಕ್ಷಣ ಸಂಸ್ಥೆಗಳ ಮೇಲೆ ಕಠಿಣ ಕ್ರಮ ಕೈಗೊಳ್ಳುವ ನಿಯಮಗಳನ್ನು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಜಾರಿಗೆ ತರುತ್ತಿದೆ. ಈಗಾಗಲೇ ತನ್ನ ವೆಬ್‌ಪುಟದಲ್ಲಿ ಈ ಕುರಿತು ಮಾಹಿತಿ ನೀಡಿರುವ ಸಂಸ್ಥೆ ಎಲ್ಲ ಸಂಸ್ಥೆಗಳಿಗೆ ಆರಂಭಿಕ ನೋಟಿಸ್ ರವಾನೆ ಮಾಡಿದೆ.

**ಹೊಸ ನಿಯಾಮವಳಿಗಳ ಜಾರಿ:** ಎಐಸಿಟಿಇ ನಿಯಂತ್ರಣ 2017' ಜಾರಿಗೊಳಿಸಿ ಈ ತಿಂಗಳ ಆರಂಭದಲ್ಲಿ ಅಧಿಸೂಚನೆ ಹೊರಡಿಸಲಾಗಿದೆ. ಇದರ ಪ್ರಕಾರ, ನಿಗದಿಗಿಂತ ಹೆಚ್ಚಿನ ವಿದ್ಯಾರ್ಥಿಗಳನ್ನು ದಾಖಲಿಸಿಕೊಂಡರೆ ಪ್ರತಿ ವಿದ್ಯಾರ್ಥಿಯಿಂದ ಸಂಗ್ರಹಿಸಲಾಗಿರುವ




**ಎಐಸಿಟಿಇಯ ಇಂತಹ ಗಟ್ಟಿ ನಿರ್ಧಾರದಿಂದ ಉಪನ್ಯಾಸಕರಿಗೆ ಸಾಕಷ್ಟು ಲಾಭವಾಗಲಿದೆ. ಇದರ ಜತೆಯಲ್ಲಿ ವಿದ್ಯಾರ್ಥಿಗಳಿಗೂ ಶೈಕ್ಷಣಿಕ ವಿಚಾರಕ್ಕೆ ಸಹಕಾರಿಯಾಗುತ್ತದೆ. ಕೆಲವೊಂದು ಸಂಸ್ಥೆಗಳು ಎಐಸಿಟಿಇಯ ನಿಯಮಗಳನ್ನು ಗಾಳಿಗೆ ತೂರಿಕೊಂಡು ಕೆಲಸ ಮಾಡುತ್ತಿತ್ತು.**

**-ವಿಕ್ಟರ್ ಮಥಾಯಸ್,** ಮಂಗಳೂರಿನ ತಾಂತ್ರಿಕ ಶಿಕ್ಷಣ ಸಂಸ್ಥೆ ಉಪನ್ಯಾಸಕರು

ಶುಲ್ಕದ ಐದು ಪಟ್ಟು ದಂಡವನ್ನು ಸಂಸ್ಥೆಗಳಿಗೆ ವಿಧಿಸಲಾಗುತ್ತದೆ. ಮೂಲ ಸೌಕರ್ಯ ಹಾಗೂ ಸೌಲಭ್ಯಗಳ ಭೌತಿಕ ಪರಿಶೀಲನೆಗಾಗಿ ಎಐಸಿಟಿಇ ಕಳುಹಿಸುವ ತಜ್ಞರಿಗೆ ತಮ್ಮ ಕಾರ್ಯನಿರ್ವಹಿಸಲು ಅವಕಾಶ ನಿರಾಕರಿಸುವ ಸಂಸ್ಥೆಗಳ ವಿರುದ್ಧ ಅತ್ಯಂತ ಕಠಿಣ ಕ್ರಮ ಕೈಗೊಳ್ಳಲು ಅನುವು ಮಾಡುವ ನಿಯಮವನ್ನು ಹೊಸ ನಿಯಮಾವಳಿಯಲ್ಲಿ ಸೇರಿಸಲಾಗಿದೆ. ಇಂತಹ ಸಂಸ್ಥೆಗಳು ಒಂದು ವರ್ಷದ ಅವಧಿಗೆ ವಿದ್ಯಾರ್ಥಿಗಳನ್ನು ದಾಖಲು ಮಾಡುವುದಕ್ಕೆ ಮಂಡಳಿ ನಿರ್ಬಂಧ ಹೇರಬಹುದು ಅಥವಾ ಸಂಸ್ಥೆಗಳ ಮಾನ್ಯತೆಯನ್ನೇ ರದ್ದುಪಡಿಸುವ ಕೆಲಸಕ್ಕೆ ಎಐಸಿಟಿಇ ಇಳಿಯಲಿದೆ.

**ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಚಾಟಿಯೇಟು:** ಎಐಸಿಟಿಇ ನಿಗದಿಪಡಿಸಿರುವಂತಹ ವೇತನ ಶ್ರೇಣಿಯ ಅನ್ವಯ 12 ತಿಂಗಳುಗಳಿಗಿಂತಲೂ ಹೆಚ್ಚಿನ ಅವಧಿಗೆ ವೇತನ ನೀಡದಿದ್ದರೆ, ನಿಗದಿತ ಶೈಕ್ಷಣಿಕ ಅರ್ಹತೆ ಹೊಂದಿರುವ ಬೋಧಕರು ಇರದಿದ್ದರೆ ಮತ್ತು ವಿದ್ಯಾರ್ಥಿಗಳು ಬೋಧಕರ ನಡುವಣ ನಿಗದಿತ ಅನುಪಾತವನ್ನು ಕಾಪಾಡಿಕೊಳ್ಳದಿದ್ದರೆ, ಅಂತಹ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಅವಕಾಶ ಕೂಡ ಎಐಸಿಟಿಇ ಪಾಲಿಗೆ ದಕ್ಕಿದೆ.

ಹೊಸ ನಿಯಮಗಳನ್ನು ಮುರಿಯುವ ಕೆಲಸಕ್ಕೆ ಇಳಿಯುವ ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಅನಿವಾಸಿ ಭಾರತೀಯ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳುವ ಸಂಸ್ಥೆಯ ಅವಕಾಶ ರದ್ದು ಮಾಡಬಹುದು. ಅಥವಾ ಹಂಚಿಕೆ ಮಾಡಿ ರುವ ಹೆಚ್ಚುವರಿ ಸೀಟುಗಳನ್ನು ರದ್ದುಗೊಳಿಸಬಹುದು ಮತ್ತು ದಾಖಲು ಮಾಡಿಕೊಳ್ಳಬಹುದಾದ ವಿದ್ಯಾರ್ಥಿಗಳ ಸಂಖ್ಯೆಯನ್ನು ಕಡಿತಗೊಳಿಸಬಹುದು. ಮಾತ್ರವಲ್ಲದೇ, ವರ್ಷದ ಮಟ್ಟಿಗೆ ವಿದ್ಯಾರ್ಥಿಗಳ ದಾಖಲಾತಿಗೆ ನಿರ್ಬಂಧ ಹೇರಬಹುದು ಅಥವಾ ಸಂಸ್ಥೆಗಳು ಮತ್ತು ಅದು ನೀಡುವ ಕೋರ್ಸ್‌ಗಳ ಮಾನ್ಯತೆ ರದ್ದುಗೊಳಿಸು ವುದಕ್ಕೂ ಅವಕಾಶ ಇದೆ ಎನ್ನುತ್ತಾರೆ ಎಐಸಿಟಿಇ ಕಾರ್ಯದರ್ಶಿ ಅಲೋಕ್ ಪ್ರಕಾಶ್.